1	2	3	4
25.	ಧಾರವಾಡ	ಧಾರವಾಡ	3049–29
		ಹುಬ್ಬಳ್ಳಿ	539–22
		ನವಲ್‌ಗುಂದ	17–01
		ಕಲಘಟಗಿ	14–19
		ಕುಂದಗೋಳ	20–27
		ಒಟ್ಟು	**3641–18**
26.	ಕೋಲಾರ	ಬಂಗಾರಪೇಟೆ	88–00
		ಕೋಲಾರ	164–26
		ಮಾಲೂರು	391–32
		ಚಿಕ್ಕಬಳ್ಳಾಪುರ	96–00
		ಒಟ್ಟು	**740–18**
	ಜುಮ್ಲಾ		**61979–09**
		BMIC ಯೋಜನೆ	
1.	ಬೆಂಗಳೂರು ನಗರ ಜಿಲ್ಲೆ		2744–35
	ಬೆಂಗಳೂರು ಗ್ರಾಮಾಂತರ ಜಿಲ್ಲೆ		22–20
		ಒಟ್ಟು	**2767–15**
	ಒಟ್ಟು		**64746–21**

820 (992) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯಕ್ಕೆ ಹೊರಗಿನಿಂದ ಬಂದಿರುವ ಖಾಸಗಿ ಕಾರ್ಖಾನೆಗಳೆಷ್ಟು ;

ಆ) ಈ ಕಾರ್ಖಾನೆಗಳಲ್ಲಿರುವ ಒಟ್ಟಾರೆ ಕಾರ್ಮಿಕರ ಸಂಖ್ಯೆ ಎಷ್ಟು ;

ಇ) ಖಾಸಗಿ ಕಾರ್ಖಾನೆಗಳಲ್ಲಿ ಕನ್ನಡಿಗರನ್ನೇ ನೇಮಕ ಮಾಡಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

ಈ) ಈ ಕಾರ್ಖಾನೆಗಳಲ್ಲಿ ಕನ್ನಡಿಗರನ್ನು ನೇಮಕ ಮಾಡಿಕೊಳ್ಳಲು ಡಾ: ಸರೋಜಿನಿ ಮಹಿಷಿ ವರದಿಯನ್ನು ಸರ್ಕಾರ ಜಾರಿಗೆ ತರಲಾಗುವುದೇ ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಉತ್ಪಾದನಾ ಕ್ಷೇತ್ರದಲ್ಲಿ ಒಟ್ಟು 71 ಬಹು ರಾಷ್ಟ್ರೀಯ ಕೈಗಾರಿಕಾ ಘಟಕಗಳು ಬಂದಿರುತ್ತದೆ.

ಆ) 21872

ಇ) ಕೈಗಾರಿಕಾ ನೀತಿಯನ್ವಯ ಕೈಗಾರಿಕೆಗಳಿಗೆ ನೀಡಲಾಗುವ ಸೌಲಭ್ಯ ರಿಯಾಯಿತಿಗಳನ್ನು ಡಾ: ಸರೋಜಿನಿ ಮಹಿಷಿ ವರದಿಯನ್ವಯ ಕನ್ನಡಿಗರಿಗೆ ಸ್ಥಳೀಯರಿಗೆ ಉದ್ಯೋಗ ನೀಡಿದಲ್ಲಿ ಮಾತ್ರ ಕೈಗಾರಿಕಾ ಘಟಕಗಳಿಗೆ ನೀಡಲಾಗುವುದೆಂಬ ನಿಬಂಧನೆಯನ್ನು ಅವುಗಳಿಗೆ ನೀಡುವ ಸೌಲಭ್ಯ ರಿಯಾಯಿತಿ ಮಂಜೂರಾತಿ ಆದೇಶಗಳಲ್ಲಿ ನಮೂದಿಸಲಾಗುತ್ತಿದೆ.

ಸದರಿ ಘಟಕಗಳು ಕನ್ನಡಿಗರನ್ನು / ಸ್ಥಳೀಯರನ್ನು ನೇಮಕ ಮಾಡಿಕೊಂಡಿರುವ ಬಗ್ಗೆ ದೃಢಪಡಿಸಿಕೊಳ್ಳಲು ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಪರಿಶೀಲಿಸಲಾಗುತ್ತಿದೆ.

ಈ) ಒಟ್ಟು 71 ಬಹು ರಾಷ್ಟ್ರೀಯ ಕೈಗಾರಿಕಾ ಘಟಕಗಳ ಪೈಕಿ 5 ಘಟಕಗಳಿಗೆ ಜಿಲ್ಲಾ ಕೈಗಾರಿಕಾ ಕೇಂದ್ರ ಬೆಂಗಳೂರು ಗ್ರಾಮಾಂತರ ಮತ್ತು ಕೋಲಾರಗಳಿಂದ ನೋಟೀಸನ್ನು ಜಾರಿ ಮಾಡಿ ಡಾ: ಸರೋಜಿನಿ ಮಹಿಷಿ ವರದಿಯಂತೆ ಕನ್ನಡಿಗರಿಗೆ/ ಸ್ಥಳೀಯರಿಗೆ ಉದ್ಯೋಗ ನೀಡುವಂತೆ ಮತ್ತು ಈಗಿರುವ ಕೊರತೆಯನ್ನು ಸರಿಪಡಿಸಿಕೊಳ್ಳುವಂತೆ ತಿಳಿಸಲಾಗಿದೆ. ವರದಿ ಬಂದ ನಂತರ ಸೂಕ್ತ ಕ್ರಮ ಜರುಗಿಸಲಾಗುವುದು.

921 (1248) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಇದುವರೆಗೂ ಎಷ್ಟು ಜನ ಕನ್ನಡಿಗರಿಗೆ ಕೈಗಾರಿಕೆಗಳಲ್ಲಿ ಉದ್ಯೋಗ ಅವಕಾಶಗಳನ್ನು ಒದಗಿಸಲಾಗಿದೆ ;

ಆ) ಯಾವ ಆಧಾರದ ಮೇಲೆ ಕನ್ನಡಿಗರಿಗೆ ಕೈಗಾರಿಕೆಗಳಲ್ಲಿ ಉದ್ಯೋಗಾವಕಾಶಗಳನ್ನು ಒದಗಿಸಲಾಗಿದೆ ;

ಇ) ಶೇಕಡವಾರು ಎಷ್ಟು ಉದ್ಯೋಗಗಳನ್ನು ಕನ್ನಡಿಗರಿಗೆ ಕಾಯ್ದಿರಿಸಲಾಗಿದೆ ;

ಈ) ಕನ್ನಡಿಗರಿಗೆ ಉದ್ಯೋಗ ನೀಡದಿರುವ ಕೈಗಾರಿಕೆಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ರಾಜ್ಯದಲ್ಲಿ ಇದುವರೆಗೂ 50ಕ್ಕಿಂತ ಹೆಚ್ಚು ಕಾರ್ಮಿಕರುಳ್ಳ 892 ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳಲ್ಲಿ 2,51,445 ಕನ್ನಡಿಗರಿಗೆ / ಸ್ಥಳೀಯರಿಗೆ ಉದ್ಯೋಗವನ್ನು ಒದಗಿಸಿ ಕೊಡಲಾಗಿದೆ.